ದಿನಾಂಕ: 12.10.2021 ರಂದು ಬೆಳಗ್ಗೆ 11.00 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿಗಳು ಹಾಗೂ ಸದಸ್ಯರು
2. ಶ್ರೀ ಯೋಗೇಶ್.ಕೆ.ಹಿ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು [ರಾಜಾಜಿನಗರ]
3. ಶ್ರೀ ಪೂಜಾರಪ್ಪ, ಸಹಾಯಕ ಅಭಿಯಂತರರು, ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
4. ಶ್ರೀ ಎನ್. ಸೋಮಶೇಖರ್ ರಾಜು, ಡ್ಯ್ಬೂ.ಸಿ.ಎಂ
5. ಶ್ರೀ ಬಿ.ಕೆ. ಶಂಕರ್ ರಾಜ್, ಸಹಾಯಕ ಅಭಿಯಂತರರು, ಬೆಸ್ಕಾಂ
6. ಶ್ರೀ ನಾಗರಾಜ.ಕೆ.ಬಿ. ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ.
7. ಶ್ರೀ ಪರಶಿವ ಮೂರ್ತಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು , ಬಿ.ಡಬ್ಲ್ಯೂ.ಎಸ್.ಎಸ್.ಬಿ.
8. ಶ್ರೀ ಎಸ್. ಜೋಗಯ್ಯ, ಹಿರಿಯ ನಾಗರೀಕರು
9. ಶ್ರೀಮತಿ ಕೆ.ಎಂ. ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ. 101
10. ಶ್ರೀಮತಿ ಡಾ: ಶೋಭಾ.ಆರ್.ಆರೋಗ್ಯ ವೈದ್ಯಾಧಿಕಾರಿ, ಕಾಮಾಕ್ಷಿಪಾಳ್ಯ
11. ಶ್ರೀ ಆರ್. ಸ್ವಾಮಿ
12. ಶ್ರೀ ಕೆ.ಆರ್. ಕೃಷ್ಣ, ಎಸ್.ಬಿ.ಐ. ಅಧಿಕಾರಿ, ಬೆಂಗಳೂರು
13. ಶ್ರೀ ಎಂ. ರವೀಂದ್ರನಾಥ್, ಎಸ್.ಬಿ.ಐ. ಅಧಿಕಾರಿ, ಬೆಂಗಳೂರು
14. ಶ್ರೀ ಎ.ಆರ್. ಶ್ರೀಧರನ್, ಎಸ್.ಬಿ.ಐ. ಅಧಿಕಾರಿ, ಬೆಂಗಳೂರು
15. ಶ್ರೀ.ಯು.ಎ. ಭಟ್
16. ಶ್ರೀ ಬಿ.ಎಸ್. ಬೆಲಪ್ಪ
17. ಶ್ರೀ ಕೆ.ಎನ್. ರೋಷನ್, ಎಸ್.ಬಿ.ಐ. ಅಧಿಕಾರಿ
18. ಶ್ರೀ ಜಿ.ಎಸ್. ಮಹಾಲಿಂಗಪ್ಪ, ಎ.ಎಸ್.ಐ. ಬಸವೇಶ್ವರನಗರ ಪೋಲಿಸ್ ಠಾಣೆ
19. ಶ್ರೀ ಲೋಕೇಶ್ವರ.ಹೆಚ್.ಎಸ್.
20. ಶ್ರೀ ರಾಜೇಶ್.ಎಂ.
21. ಶ್ರೀ ಸುಬ್ರಮಣಿ
22. ಶ್ರೀ ಅರವಿಂದ್
23. ಶ್ರೀ ಹನುಮಂತ
24. ಶ್ರೀ ಶ್ರೀನಿವಾಸ
25. ಶ್ರೀ ಎಂ.ಜೆ.ಎಸ್. ರಾವ್
26. ಶ್ರೀ ಎಂ.ಜಿ.ಆರ್. ರಾವ್
27. ಶ್ರೀಮತಿ ಕೀರ್ತಿ ಚಂದ್ರಿಕಾ
28. ಶ್ರೀ ಮಂಜು
29. ಶ್ರೀಮತಿ ವಿಜಯಲಕ್ಷ್ಮಿ.ಸಿ
30. ಶ್ರೀ ಸಿದ್ದರಾಜು, ಸಹಾಯಕ ಅಭಿಯಂತರರು [ವಿದ್ಯುತ್]
31. ಶ್ರೀ ಗಂಗಣ್ಣ.ಎಲ್.ಸಿ.
32. ಶ್ರೀ ಕೆ. ಗುಣಶಂಕರ್
33. ಶ್ರೀ ಚೇತನ್
34. ಶ್ರೀ ರಮೇಶ.ಎಸ್.ಟಿ
35. ಶ್ರೀ ಸೈಯದ್ ಜಮೀಲ್
36. ಶ್ರೀಮತಿ ಸ್ಮಿತಾ.ಆರ್.
37. ಶ್ರೀ ಎಸ್. ಶ್ರೀನಿವಾಸ
38. ಶ್ರೀ ಶ್ರೀನಿವಾಸ
39. ಶ್ರೀ ಎ.ಎಸ್. ಮಧುಸೂದನ್
40. ಶ್ರೀ ಎಸ್.ಎನ್. ಚಂದ್ರರಾಜು
41. ಶ್ರೀಮತಿ ರೂಪಶ್ರೀ.ಕೆ.

Scanned by CamScanner

ದಿನಾಂಕ: 06.09.2021 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 12.10.2021ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ **ಎಸ್.ಬಿ.ಐ. ಆಫೀರ್ಸ್ ಸಮುಧಾಯ ಭವನ, ಎಸ್.ಬಿ.ಐ. ಕಾಲೋನಿ, ಬಸವೇಶ್ವರನಗರ, ಕಾಮಾಕ್ಷಿಪಾಳ್ಯ,** ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಶ್ರೀ ಎ.ಎಸ್.ಮಧುಸೂಧನ್, ಸದಸ್ಯರು, ಕರೇಕಲ್ಲು ಪ್ರದೇಶದಲ್ಲಿ ರಸ್ತೆಯಲ್ಲಿ ಗುಂಡಿ ಬಿದ್ದಿದ್ದು, ಅದಕ್ಕೆ ವಾರ್ಡ್ ಅಭಿಯಂತರರಿಂದ ತುರ್ತಾಗಿ ಕೆಲಸ ಕೈಗೊಳ್ಳುವಂತೆ ತಿಳಿಸಿದರು.

2. ಶ್ರೀಮತಿ ರೂಪಶ್ರೀ, ಕಿರಿಯ ಆರೋಗ್ಯ ಪರಿವೀಕ್ಷಕರು ರವರು ಸಭೆಯಲ್ಲಿ ಮಾತನಾಡುತ್ತಾ, 1 ರಿಂದ 198 ವಾರ್ಡ್ ಗಳಲ್ಲಿ ಬರುವ ಪೌರಕಾರ್ಮಿಕರು ಮುಷ್ಕರ ಇರುವ ಕಾರಣ ಬೆಳಿಗ್ಗೆ ಪಾಳಿಯಲ್ಲಿ ಕಸ ನಿರ್ವಹಣೆಯನ್ನು ಮಾಡಲು ಸ್ವಲ್ಪ ವ್ಯತ್ಯಾಸವಾಗಿರುವ ಕಾರಣ ಪೌರಕಾರ್ಮಿಕರು ಚರ್ಚಿಸಿ ಮಧ್ಯಾಹ್ನದ ಪಾಳಿಯಲ್ಲಿ ಕೆಲಸ ನಿರ್ವಹಿಸುವಂತೆ ಮನವಿ ಮಾಡಿರುತ್ತೇನೆ ಎಂದು ಸಭೆಯಲ್ಲಿ ತಿಳಿಸಿದರು.

3. ಶ್ರೀ ಅನಿಲ್ ರಂಗಣ್ಣ, ಮಾತನಾಡುತ್ತಾ, ಮಾಗಡಿ ಮುಖ್ಯ ರಸ್ತೆಯಲ್ಲಿ ಬೆಸ್ಕಾಂ ವತಿಯಿಂದ ಕೇಬಲ್ ಅಳವಡಿಸಲು ಅನುಮತಿ ಪಡೆಯದೆ ರಸ್ತೆಯನ್ನು ಕತ್ತರಿಸಿರುವುದರಿಂದ ಈ ರಸ್ತೆಯಲ್ಲಿ ಓಡಾಡುವ ವಾಹನ ಸವಾರರಿಗೆ ತೊಂದರೆಯಾಗುತ್ತಿರುವುದಾಗಿ ಸಭೆಗೆ ತಿಳಿಸಿದರು. ಇದರ ಬಗ್ಗೆ ನೋಡಲ್ ಅಧಿಕಾರಿಗಳು ಮಾತನಾಡುತ್ತಾ, ಸಂಬಂಧಪಟ್ಟ ಬೆಸ್ಕಾಂ ಇಲಾಖೆಯವರಿಗೆ ಕೂಡಲೇ ದುರಸ್ಥಿಪಡಿಸುವಂತೆ ಪತ್ರ ಬರೆಯಲು ವಾರ್ಡ್ ಕಾರ್ಯದರ್ಶಿಗೆ ತಿಳಿಸಿದರು.

4. ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು ಮಾತನಾಡುತ್ತಾ, ಗಾಡಿ ಮುದ್ದಣ್ಣ ರಸ್ತೆಯಲ್ಲಿ ಸುಮಾರು 4 ತಿಂಗಳುಗಳಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಸಬ್‌ಲೈನ್ ವತಿಯಿಂದ ಕಾಮಗಾರಿಯನ್ನು ಪೂರ್ಣಗೊಳಿಸದೇ ಇರುವುದರಿಂದ ಸ್ಥಳೀಯ ನಿವಾಸಿಗಳು ಹಾಗೂ ಸಾರ್ವಜನಿಕರಿಗೆ ಓಡಾಡಲು ಕಷ್ಟಕರವಾಗುತ್ತಿದ್ದು, ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಬಾರಿ ದೂರು ನೀಡಿದರು ಸಹ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಸಭೆಯಲ್ಲಿ ಹಾಜರಿದ್ದ ಶ್ರೀಮತಿ ದೀಪಾ, ಸಹಾಯಕ ಅಭಿಯಂತರರು ಮಾತನಾಡುತ್ತಾ, ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಈಗಾಗಲೇ ಗಡುವು ವಿಧಿಸಲಾಗಿದ್ದು, ಗುತ್ತಿಗೆದಾರರು ಸದರಿ ಅವಧಿಯಲ್ಲಿ ಪೂರ್ಣಗೊಳಿಸದೆ ಇದ್ದಲ್ಲಿ ದಂಡ ವಿಧಿಸಲು ಕ್ರಮ ಕೈಗೊಳ್ಳಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

Scanned by CamScanner